ಕಂಡಕ್ಟರ್ ರಾಜು, ಗುಬ್ಬಿ
*ಪ್ರೇಮಪಾಶಕ್ಕೂ, ಯಮಪಾಶಕ್ಕೂ ವ್ಯತ್ಯಾಸವೇನು?*



ಪ್ರೇಮಪಾಶ ಟೂ ವೇ; ಯಮಪಾಶ ಒನ್‌ವೇ!

ಎಂ.ಎನ್. ಸೋಮಶೇಖರ್, ಮೈಸೂರು
*ದ್ರೌಪದಿಗೆ ಐವರು ಪತಿಯರಿದ್ದರು. ಆದರೆ, ಈ ಕಲಿಯುಗದಲ್ಲಿ ಓರ್ವ ಪತ್ನಿಗೆ ಎಷ್ಟು ಪತಿಯರಿದ್ದಾರೆ?*
ವಯಸ್ಸಿನಲ್ಲಿ ಒಂದೇ ಪತಿ, ವಯಸ್ಸಾಗುತ್ತಿದ್ದಂತೆ ಅಲೋಪತಿ, ಹೋಮಿಯೋಪತಿ, ನ್ಯಾಚುರೋಪತಿ, ಸಿಂಪತಿ.....

ಗಾಯತ್ರಿ, ರಾಜಾಜಿನಗರ
*ನೀವು ಕೇಳಿದಿರಿ ಅಂಕಣ ಇಷ್ಟೊಂದು ಜನಪ್ರಿಯಗೊಳ್ಳಲು ಕಾರಣ...?*
ಬೀಚಿಯವರ ತಳಪಾಯ, ವೃಶ್ಚಿಕದ ಕುಟುಕಿನ ಸೊಬಗು, ಸಿಂಹದ ಅವಲೋಕನ, ಓದುಗರ ಪ್ರೀತಿ!

ಪವನ್ ಕುಮಾರ್ ಜೋಶಿ, ಬಳ್ಳಾರಿ
ದಾರಿ ಯಾವುದಯ್ಯ ರಾಜಕೀಯಕ್ಕೆ, ದಾರಿ ತೋರಿಸಯ್ಯ ಮಂತ್ರಿಗಿರಿಗೆ?



ರೌಡಿ ಆಗಿರಯ್ಯಾ ಲಾಂಗು ಇರಲಿ, ವೋಟು ಕದಿಯಿರಯ್ಯಾ ಮಂತ್ರಿಗಿರಿಗೆ!

ಟಿ.ಆರ್. ರವೀಂದ್ರ, ಬೆಂಗಳೂರು
*ಒಂದು ವೇಳೆ ಶ್ರೀಕೃಷ್ಣ ದ್ರೌಪದಿಗೆ ವಸ್ತ್ರದಾನ ಮಾಡದಿದ್ದರೆ ಏನಾಗುತ್ತಿತ್ತು?*
ಶ್ರೀಕೃಷ್ಣನ ಬಳಿ ಇದ್ದ ಕದ್ದ ಸೀರೆಗಳ ಸ್ಟಾಕ್ ವೇಸ್ಟ್ ಆಗುತ್ತಿತ್ತು!

ಸೃಜನ ಜೈನ್, ಹೂವಿನಹಡಗಲಿ
*ನೀವು ಇಷ್ಟಪಡುವ ಪ್ರಶ್ನೆ ನಿಮಗೆ ಸಿಕ್ಕಿದೆಯೆ?*
ಪ್ರಶ್ನೆಪತ್ರಿಕೆಯೇ ಸಿಕ್ಕಿದೆ. ನನ್ನ ಅರ್ಧಾಂಗಿ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ನಾನು ಎಂಬ ಅಹಂಕಾರ ಇಳಿಯುವುದು ಯಾವಾಗ?*
ನಾವು ಎಂಬ ಮಮಕಾರ ಬೆಳೆದಾಗ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಮುಖಪುಟಕ್ಕೆ ಇದ್ದ ಬೆಲೆ ಕೊನೆಯ ಪುಟಕ್ಕೆ ಇರುವುದಿಲ್ಲವೇಕೆ?*
ಮುಖಪುಟಕ್ಕೆ ಇತರ ಪುಟಗಳ ಬೆಂಬಲವಿರುತ್ತದೆ; ಕೊನೆಯ ಪುಟ ಒಂಟಿ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ವಿವಾಹ ಸಮಯದಲ್ಲಿ ನವದಂಪತಿಗಳಿಗೆ ಪುರೋಹಿತರು ಅರುಂಧತಿ ನಕ್ಷತ್ರ ತೋರಿಸುವ ಕಾರಣವೇನು?*
ವರನಿಗೆ ಇರುಳುಗಣ್ಣು ಇರುವುದೋ ಇಲ್ಲವೋ ಎಂದು ತಿಳಿದುಕೊಳ್ಳಲು!

ರವೀಂದ್ರನಾಥ ಶಿ, ಯಡಹಳ್ಳಿ, ಬಾಗಲಕೋಟೆ
*ಸಾತ್ವಿಕತೆಗೂ, ಡಾಂಭಿಕತೆಗೂ ಇರುವ ವ್ಯತ್ಯಾಸವೇನು ಗುರು?*
ಸಾತ್ವಿಕತೆ ಧಾರೆ, ಡಾಂಭಿಕತೆ ರಿಸೆಪ್ಷನ್!

ಅಶ್ವಿನಿ ವಿ. ಹೆಗಡೆ, ಭೈರುಂಬೆ
*ಬಸ್ಸಿನಲ್ಲಿ ಪ್ರಯಾಣಿಕರಿಗೆ ಮಂಪರು ಬರುವಂತೆ ಚಾಲಕನಿಗೆ ಏಕೆ ಬರುವುದಿಲ್ಲ?*
ತೂಕಡಿಸಿ ಒರಗಲು ಪಕ್ಕದಲ್ಲಿ ಭುಜ ಇರುವುದಿಲ್ಲವಲ್ಲ!

ವಿ.ಹಮೀದ್, ವಿಟ್ಲ
*ಹೂವಿನಲ್ಲಿ ಮಕರಂದವೇ ಇಲ್ಲದಿರುತ್ತಿದ್ದರೆ ದುಂಬಿಗಳು ಏನು ಮಾಡುತ್ತಿದ್ದವು?*
ಮಕರಂದ ಹಂಚುವ ಏಜೆಂಟ್‌ಗಳಾಗುತ್ತಿದ್ದವು!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ಮನುಷ್ಯನಿಗೆ ಪಂಚೇಂದ್ರಿಯಗಳಿವೆ; ಆದರೆ, ಕೈಯನ್ನು ಪಂಚ್ ಇಂದ್ರಿಯ ಎನ್ನಬಹುದೇ?*
ಸರಿಯೇ; ಆಗ ಹಲ್ಲನ್ನು ಕಚ್ಚೇಂದ್ರಿಯ, ಕಾಲನ್ನು ಕಿಕ್ಕೇಂದ್ರಿಯ, ನಾಲಿಗೆಯನ್ನು ನೆಕ್ಕೇಂದ್ರಿಯ ಎನ್ನುವಿರೇನು?

ಕೊ.ಸು. ನರಸಿಂಹಮೂರ್ತಿ, ಮೈಸೂರು
*ಯಡ್ಯೂರಪ್ಪನವರ ಸಾಹಸಗಳ ಚಿತ್ರದ ಶೀರ್ಷಿಕೆ...?*
ಅಳುಮುಂಜಿಯ ಅವಾಂತರಗಳು!

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ ಹ. ಬಗಲಿ
*ಮಕ್ಕಳು ಚಿಕ್ಕವರಿದ್ದಾಗ ಎದೆಗೆ ಒದ್ದರೆ ಹಿತ, ದೊಡ್ಡವರಾದಾಗ ಒದ್ದರೆ ಹೃದಯಾಘಾತ; ಏಕೆ?*
ಅಷ್ಟರಲ್ಲಿ ಮಗು ಬೆಳೆದು ಕತ್ತೆಯಾಗಿರುವುದರಿಂದ!

ನರಸಿಂಹ ಎಂ. ಪೈ, ಕಾಸರಕೋಡ
*ಗುರು ಇಲ್ಲದ ವಿದ್ಯೆ ಯಾವುದು?*
ಕ್ಲಾಸ್ ಬಂಕ್ ಮಾಡುವುದು!

ಲ್ಯಾಂಡ್ ಬ್ಯಾಂಕ್ ಡಿ. ಚಂದ್ರಕುಮಾರ್, ಬೆಂಗಳೂರು
*ದೇವರು ಮೈಮೇಲೆ ಬಂದವರಿಗೂ, ದೆವ್ವ ಮೈಮೇಲೆ ಬಂದವರಿಗೂ ಇರುವ ವ್ಯತ್ಯಾಸವೇನು?*
ಇವನಿಗೆ ಬಾಬಾ ಎನ್ನುತ್ತಾರೆ, ಅವನಿಗೆ ಹೋಗು ಹೋಗು ಎನ್ನುತ್ತಾರೆ!

ಎಂ.ಬಿ. ಖೋದಾನಪುರ, ಸವದತ್ತಿ
*ಹೆಂಡತಿಯಾದವಳು ಶೂರ್ಪನಖಿಯಾದರೆ?*



ಗಂಡ ಪ್ಲಾಸ್ಟಿಕ್ ಸರ್ಜನ್ ಆಗುತ್ತಾನೆ!

ಮಹಾವೀರ ಕಾಸರ, ಶಿವಮೊಗ್ಗ
*ಕೃಷ್ಣ ಗೀತೋಪದೇಶ ಮಾಡಿದ್ದು ಅರ್ಜುನನಿಗೆ ಮಾತ್ರ; ಅದು ಬೇರೆಯವರಿಗೆ ಹೇಗೆ ಗೊತ್ತಾಯ್ತು?*
ಧೃತರಾಷ್ಟ್ರ ಚಾನಲ್‌ನಲ್ಲಿ ಸಂಜಯ ಒಂದೊಂದು ಸರತಿ ಹೊಡೆದದ್ದನ್ನೂ ಮೂರು ಮೂರು ಸರತಿ ನೇರಪ್ರಸಾರ ಮಾಡಿದನಲ್ಲ!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ
*ರಾಮಾ.. ರಾಮಾ.. ಆ ಕ್ಷುದ್ರ ಒಸಾಮಾನ ದೇಹವನ್ನು ಸಮುದ್ರಕ್ಕೆಸೆದರಲ್ಲಾ, ಸಮುದ್ರವೇನು ಡಸ್ಟ್‌ಬಿನ್ನೇ...?*
ಪಾಕಿಸ್ತಾನದಲ್ಲಿದ್ದಷ್ಟು ದಿನವೂ ಸ್ನಾನ ಮಾಡದ್ದರಿಂದ ಒಂದು ಸಮುದ್ರದಷ್ಟು ಸ್ನಾನ ಅಗತ್ಯವಿತ್ತಂತೆ!

ಕಾಳೀಹುಂಡಿ ಶಿವಕುಮಾರ್, ಮೈಸೂರು
*ಹೆಂಡತಿಯ ಕಾಲ್ಗುಣಕ್ಕೂ, ಪ್ರೇಯಸಿಯ ಕಾಲ್ಗುಣಕ್ಕೂ ಇರುವ ವ್ಯತ್ಯಾಸವೇನು?*
ಒಂದರಿಂದ ಸಹ-ವಾಸ, ಮತ್ತೊಂದು ಕೇವಲ ಸಹವಾಸ!

■ ರಾಮ್